ಇಸ್ತಿಹಾರ್.

ಕೋಲಾರ ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖಾ.

ತಾರೀಖು 7ನೇ ಜನವರಿ 1896.

ಇದರಿಂದ ಸಕಲ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸ್ ೧೮೭೮ನೇ ಇಸವಿ ಜೂ ೮ನೇ ತಾರೀಖಿನ ಫಾರೆಸ್ಟ್ ರೂಲ್ಸು 13ನೇ ಸೆಕ್ಷನ್ ಅನುಸರಿಸಿ, ಈ ಕೆಳಗೆ ನಮೂದಿರುವ ಸ್ಟೇಟ್ಟು ಮತ್ತು ರಿಜರ್ವ್ ಫಾರೆಸ್ಟುಗಳು ಮತ್ತು ಪ್ರೊಟೇಕ್ಟೆಡ್‌ಗಳು 1896ನೇ ಇಸವಿ ಫಿಬ್ರವರಿ 1ರ ಲಾಗಾಯಿತು 1896ನೇ ಇಸವಿ ಮೇ ಆಖೈರುವರೆಗೆ ಬಿಸಲು ಕಾಲದಲ್ಲಿ ಜನಗಳಿಗೆ ಬಂದು ಮಾಡಲ್ಪಟ್ಟಿರುತ್ತೆ.

2. ಈ ಮೇಲ್ಕಂಡ ಕಾಲದಲ್ಲಿ ಯಾವ ವಿಧವಾದ ಪಿಕಾರಿಯೂ ನಿರೋಧಿಸಲ್ಪಟ್ಟಿಧೆ. ಅತಿಕ್ರಮ ಪ್ರವೇಶ ಮಾಡುವರು ಪ್ರಾಸಿಕ್ಯೂಷನ್‌ಗೆ ಗುರಿಯಾದಾರು.

ನಂಬರ್.	ಸ್ಟೇಟ್ಟು ಮತ್ತು ರಿಜರ್ವ್ ಫಾರೆಸ್ಟುಗಳು ಮತ್ತು ಪ್ರೊಟೇಕ್ಟೆಡ್‌ಗಳ ಹೆಸರು.	ತಾಲ್ಲೂಕು.
I	ಫಾರೆಸ್ಟ್‌ಗಳು.	
1	ನಂದೀದುರ್ಗ	ಚಿಕ್ಕಬಳ್ಳಾಪುರ
2	ನರಸಿಂಹದೇವರ ಬೆಟ್ಟ	ಡಿಟೋ, ಗೋರೀಬಿದನೂರು ಗುಡಿಬಂಡೆ ಮತ್ತು ಸಬ್ ತಾಲ್ಲೂಕು
3	ಕಾಮಸಂದ್ರ ಜಂಗಲ್ ಮತ್ತು ಅದರಲ್ಲಿರುವ ಪ್ರೊಟೇಕ್ಟೆಡ್‌ಗಳು	ಬೌರಿಂಗ್‌ಪೇಟೆ ಮತ್ತು ಮಾಲೂರು
4	ರಾಯಲ್‌ಪಾಡು, ಅಡ್ಡಗಲ್ಲು, ನೆಲವಂಕಿ ಜಂಗಲ್‌ಗಳು ಮತ್ತು ಅವುಗಳಲ್ಲಿರುವ ಪ್ರೊಟೇಕ್ಟೆಡ್‌ಗಳು	ಚಿಂತಾಮಣಿ ಮತ್ತು ಶ್ರೀನಿವಾಸಪುರ ಸಬ್ ತಾಲ್ಲೂಕು.
5	ಶ್ರೀನಿವಾಸಪುರ ಯೆಲ್ಲೂರು ಜಂಗಲ್ ಮತ್ತು ಅವುಗಳಲ್ಲಿರುವ ಪ್ರೊಟೇಕ್ಟೆಡ್‌ಗಳು	ಶ್ರೀನಿವಾಸಪುರ ಸಬ್ ತಾಲ್ಲೂಕು ಮತ್ತು ಮುಳಬಾಗಲು
6	ಅಗರದ ಜಂಗಲ್	ಮುಳಬಾಗಲು
7	ಹೊಸೂರು, ಅಣಜಗಾನಹಳ್ಳಿ, ಪಾಳ್ಯೆಗಾರ್ ಪೊದೆ	ಶ್ರೀನಿವಾಸಪುರ ಸಬ್ ತಾಲ್ಲೂಕು
8	ಇಟಿಕಲ್ ದುರ್ಗ ಫಾರೆಸ್ಟು	ಬಾಗೇಪಲ್ಲಿ
9	ವಲಸೆ ಫಾರೆಸ್ಟು	ಗೋರೀಬಿದನೂರು ಡಿಟೋ
10	ಗೆದರೆಪಟ್ಟ ಮತ್ತು ಯೆಮ್ಮಗುಟ್ಟ ಜಂಗಲ್‌ಗಳು (ಸಂದಲ್‌ವೇರಾವಾಗಿ ರತಕ್ಕ ಪ್ರದೇಶಮಾತ್ರವೆ)	
II	ಪ್ರೊಟೇಕ್ಟೆಡ್‌ಗಳು.	
11	ನಂದಿ	ಚಿಕ್ಕಬಳ್ಳಾಪುರ
12	ಸುಲಾಲಪ್ಪನದಿನ್ನೆ	ಡಿಟೋ
13	ಗಾಜಲದಿನ್ನೆ	ಕೋಲಾರ
14	ಸಂಗಂಡಹಳ್ಳಿ	ಡಿಟೋ
15	ಮಾಲೂರು	ಮಾಲೂರು
16	ಬೀಚಗಾನಹಳ್ಳಿ	ಗುಡಿಬಂಡೆ ಸಬ್ ತಾಲ್ಲೂಕು
17		ಶಿಡ್ಲಘಟ್ಟ
18	ತಿರುಮಲಯ್ಯನದಿನ್ನೆ	ಡಿಟೋ
19	ಚವುಡಸಂದ್ರ	ಡಿಟೋ
20	ಗೊರಮಡುಗು	ಡಿಟೋ
21.	ಯೆಲ್ಲಂಪಲ್ಲಿ	ಬಾಗೇಪಲ್ಲಿ

ಬಿ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ನೋಟಿಸ್.

ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಡಿಪಾರ್ಟ್‌ಮೆಂಟ್.

ತಾರೀಖು 26ನೇ ಡಿಸೆಂಬರ್ 1895ನೇ ಇಸವಿ.

1890ನೇ ಇಸವಿ ಫೆಬ್ರವರಿ 1ನೇ ತಾರೀಖಿನ ಮೈಸೂರ ಗೆಜೆಟ್ 2ನೇ ಭಾಗ 26ನೇ ಪುಟದಲ್ಲಿ ಪ್ರಾಯಿಷ್ ಮಾಡಿರುವ ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್ ಸಾಹೆಬರವರ ನೋಟಿಫಿಕೇಷ್ ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,

ಈ ಕೆಳಗೆ ನಮೂದಿಸಿರುವ ತುಮಕೂರು ಡಿಸ್ಟ್ರಿಕ್ಟಿನ ಸ್ಟೇಟ್ ಫಾರೆಸ್ಟ್ ಮತ್ತು ಪ್ರೊಟೇಕ್ಟೆಡ್‌ಗಳನ್ನು 1896ನೇ ಇಸವಿ ಜನವರಿ 1ನೇ ತಾರೀಖು ಲಾಗಾಯಿತು ಮೇ ಆಖೈರುವರೆಗೂ ಬಂದ್ ಮಾಡಲ್ಪಟ್ಟಿರುತ್ತೆ.

ಅಂಬುಗಾರರಿಗೂ ಷಿಕಾರಿಗಳಿಗೂ ಬೇಟೆಗಾರರಿಗೂ ಸಹ ಲೈಸೆನ್ಸು ಕೊಡಲ್ಪಡುವದಿಲ್ಲಾ. ರೂಲ್ ಅತಿಕ್ರಮಿಸಿ ಪ್ರವೇಸಿಸುವವರನ್ನು ಕ್ರಮವಾಗಿ ಸಿಕ್ಷಿಸಲ್ಪಡುವದು.

ಫಾರೆಸ್ಟ್ ಯಾ ಪ್ಯಾಟೇರ್ಷ ಹೆಸರು.	ತಾಲ್ಲೂಕು ಹೆಸರು.
1. ದೇವರಾಯದುರ್ಗ ಸ್ಟೇಟ್ ಫಾರೆಸ್ಟ	ತುಮಕೂರು ತಾಲ್ಲೂಕು
2. ಮದ್ದಗಿರಿ ಸ್ಟೇಟ್ ಫಾರೆಸ್ಟು, ಕೊಳ್ಳಿಕಲ್ ಬ್ಲಾಕು ಸೇರಿ	ಮದ್ದಗಿರಿ ಡಿಟೋ
3. ಹುಲಿಯೂರ್ ದುರ್ಗ ಸ್ಟೇಟ್ ಫಾರೆಸ್ಟ್, ಕಂಪ್ಲಾಪುರ ಬ್ಲಾಕು ಸೇರಿ	ಕುಣಿಗಲ್ ಡಿಟೋ
4. ಬುಕ್ಕಪಟ್ಟಣ ಕುಚಲೆದೊರೆ ಸ್ಟೇಟ್ ಫಾರೆಸ್ಟ್	ತಿರು ಚಿಕ್ಕನಾಯಿಕನಹಳ್ಳಿ ತಾಲ್ಲೂಕು ಮತ್ತು ಗುಬ್ಬೀ ತಾಲ್ಲೂಕು
5. ಕುದರೆಕಣಿವೆ ಸ್ಟೇಟ್ ಫಾರೆಸ್ಟ್	ಹುಳಿಯಾರ ಸಬ್ ತಾಲ್ಲೂಕು
6. ನೂಳೇಕೆರೆ ಪ್ಯಾಟೇರ್ಷ	ಕೊರಟಗೆರೆ ಡಿಟೋ
7. ದಾಸರಹಳ್ಳಿ ಡಿಟೋ	ತುಮಕೂರು ತಾಲ್ಲೂಕು
8. ಗೊಲ್ಲಹಳ್ಳಿ ಮಲ್ಲಸಂದ್ರ ಡಿಟೋ	
9. ಲಿಂಗೇನಹಳ್ಳಿ ಡಿಟೋ	
10. ಬಳ್ಳಾಪುರ ಡಿಟೋ	
11. ಆಡಗೂರು ಡಿಟೋ	ಗುಬ್ಬೀ ತಾಲ್ಲೂಕು
12. ಗಂಟಿಗಾನಹಳ್ಳಿ ಡಿಟೋ	ಕೊರಟಗೆರೆ ಸಬ್ ತಾಲ್ಲೂಕು

ಯಂ. ವೆಂಕಟನಾರಣಪ್ಪ,
ಅಸಿಸ್ಟೆಂಟ್ ಕ್ಯಾ ಸರ್ವೇಟರ್ ಆಫ್ ಫಾರೆಸ್ಟ್ಸ್.

ಮೈಸೂರು ಡಿಸ್ಟ್ರಿಕ್ಟು.
ಪ್ರಕಟನೆ.
ತಾರೀಖು 1ನೇ ಜನವರಿ 1896.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಇದ್ದರಿಯಲ್ಲಿ ಕಂಡ ಹೋಬಳಿಗಳಲ್ಲಿ ಸಂದಲ್ ಮರಗಳನ್ನು ಬೇರು ಸಮೇತವಾಗಿ ಕೀಳಿಸಿ ಸ್ವೋರ ಟ ಕೆತ್ತನೆ ಮಾಡಿ ಆಯಾಯ ಹೋಬಳಿಗಳಿಗೆ ಬಾಜಾದಲ್ಲಿ ತೋರಿಸಿರುವ ಕೋಣಿಗಳಿಗೆ 1896ನೇ ಇಸವಿ ಅಕ್ಟೋಬರ್ ಆಖೈರ್ ವಳ ಗಾಗಿ ಸಾಗಿಸುವದಕ್ಕೋಸ್ಕರ ದರಖಾಸ್ತುಗಳನ್ನು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರು 1896ನೇ ಇಸವಿ ಜನವರಿ ತಾರೀಖು 31ರ ವರಿಗೆ ತಗದುಕೊಳ್ಳುತ್ತಾರೆ.

ತಾಲ್ಲೂಕು.	ಹೋಬಳಿ.	ಕೋಣಿ.	ಮೊತ್ತ.
ಹುಣಸೂರು	ಬೆಟ್ಟದಪುರ	ಹುಣಸೂರು	50 ಟನ್
ಹೆಗ್ಗಡದೇವನಕೋಟೆ	ಚನ್ನಹಳ್ಳಿ	ಡಿಟೋ	50 ಟನ್
ಗುಂಡ್ಲು	ರಾಘವಾಪುರ	ಶ್ರೀರಂಗಪಟ್ಟಣ	25 ಟನ್
ಚಾಮರಾಜನಗರ	ಸಂತೆಮಾರಹಳ್ಳಿ	ಡಿಟೋ	25 ಟನ್
ಮೈಸೂರು	ಸಿಂದವಳ್ಳಿ	ಡಿಟೋ	25 ಟನ್

2. ತಮ್ಮಾ ದರಖಾಸ್ತುಗಳೂ "ಫಲಾನಾ ಕೋಣಿಗೆ ಫಲಾನಾ ಹೋಬಳಿಯಿಂದ ಸಂದಲ್ ಮರಗಳನ್ನು ಕೀಳಿಸಿ ಪೊರಟ ಕೆತ್ತನೆಯಿಂದ ಸಾಗಿಸಲು ದರಖಾಸ್ತು" ಯಂಬದಾಗಿ ವೇಲ್ ವಿಳಾಸ,ಬರದು ಮೊಹರ್ ಮಾಡಿ ರಿಜಿಸ್ಟರ್ ಮೂಲಕ ರವಾನಿಸಬೇಕು. ದರಖಾಸ್ತು ಜೊತೆಯಲ್ಲಿ ದರಖಾಸ್ತು ಮಾಡಲ್ಪಡುವ ಹುಣಸೂರು ಮತ್ತು ಹೆಗ್ಗಡದೇವನಕೋಟೆ ಪ್ರತಿ ಬಂದು ಹೋಬಳಿಗೂ 100 ರೂಪಾಯಿ ಮತ್ತು ಇತರ ತಾಲ್ಲೂಕು ಪ್ರತಿ ಬಂದು ಹೋಬಳಿಗೂ 50 ರೂಪಾಯಿ ಬೆಲೆಯುಳ್ಳ ಕರೆನ್ಸೀ ನೋಟುಗಳಿ ಯಾ ಪ್ರೋನೋಟುಗಳಿ ರವಾನಿಸಬೇಕು. ದರಖಾಸ್ತುಗಳು 1896ನೇ ಇಸವಿ ಜನವರಿ 31ನೇ ತಾರೀಖಿನಲ್ಲಿ ಹಾಜರು ಇರತಕ್ಕ ದರಖಾಸ್ತುದಾರ್ರ ಯದುರಿಗೆ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ ವಡೆಯಲ್ಪಟ್ಟು ಕರೆನ್ಸೀ ನೋಟುಗಳು ವಾಪಸು ಮಾಡಲ್ಪಡುವವು.